ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

Office of the Deputy Commissioner, Mysuru District, Mysuru-570005

ದೂರವಾಣಿ ಸಂ:0821-2424079 ಫ್ಯಾಕ್ಸ್ ಸಂ:2429012 & 2428383 E-Mail:-deo.mysuru@gmail.com

ನಂ.ಇಎಲ್ಎನ್ (1) ಸಿಆರ್ 103 /2022-23

ದಿನಾಂಕ:18.03.2023.

ಚುನಾವಣಾ ಜರೂರು

ಗೆ,

1. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಗಳಿಗೆ.
2. ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿಗಳಿಗೆ.
3. ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮೈಸೂರು
4. ಅಧೀಕ್ಷಕ ಅಭಿಯಂತರರು, ನೀರಾವರಿ ಇಲಾಖೆ (ದಕ್ಷಿಣ), ಮೈಸೂರು
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲೆ, ಮೈಸೂರು
6. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು
7. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
8. ವ್ಯವಸ್ಥಾಪಕ ನಿರ್ದೇಶಕರು, ಚೆಸ್ಕಾಂ, ಮೈಸೂರು
9. ಆಡಳಿತಾಧಿಕಾರಿಗಳು, ಕಾವೇರಿ ನೀರಾವರಿ ನಿಗಮ, ಮೈಸೂರು
10. ಆಡಳಿತಾಧಿಕಾರಿಗಳು, ಕಾವೇರಿ ಅಚ್ಚುಕಟ್ಟು ಪ್ರದೇಶಾವೃದ್ಧಿ ನಿಗಮ, ಮೈಸೂರು
11. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಮೈಸೂರು ಮತ್ತು ಹುಣಸೂರು
12. ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ನಿಗಮ, ಮೈಸೂರು
13. ವ್ಯವಸ್ಥಾಪಕ ನಿರ್ದೇಶಕರು, ಎಂ.ಡಿ.ಸಿ.ಸಿ. ಬ್ಯಾಂಕ್, ಮೈಸೂರು
14. ವ್ಯವಸ್ಥಾಪಕ ನಿರ್ದೇಶಕರು, ಬಣ್ಣ ಮತ್ತು ಅರಗು ಕಾರ್ಖಾನೆ, ಮೈಸೂರು
15. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು-ಚಾಮರಾಜನಗರ ಹಾಲು ಒಕ್ಕೂಟ, ಮೈಸೂರು
16. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು
17. ಕಾರ್ಯನಿರ್ವಾಹಕ ಅಧಿಕಾರಿಗಳು, ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು
18. ಜನರಲ್ ಮ್ಯಾನೇಜರ್, ರೇಷ್ಮೆ ನೆಯ್ಗೆ ಕಾರ್ಖಾನೆ, ಮಾನಂದವಾಡಿ ರಸ್ತೆ, ಮೈಸೂರು
19. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ ನಿಯಮಿತ, ಮೈಸೂರು
20. ಉಪ ವಿಭಾಗಾಧಿಕಾರಿಗಳು, ಮೈಸೂರು ಮತ್ತು ಹುಣಸೂರು ಉಪವಿಭಾಗ
21. ಸಹಾಯಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬಿ.ಎಂ.ಆಸ್ಪತ್ರೆ ಎದುರು, ಮೈಸೂರು
22. ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರವರಿಗೆ

ಮಾನ್ಯರೆ,

ವಿಷಯ : ವಿಧಾನಸಭೆ ಸಾರ್ವತ್ರಿಕ ಚುನಾವಣೆಗಳು-2023 ರ ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ

ಉಲ್ಲೇಖ: ಮಾನ್ಯ ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ಡಿ.ಪಿ.ಎ.ಆರ್ 43 ಚುಸವಿ (ಅಡಿಶನಲ್.ಸಿ.ಇ.ಓ-1) 2022 ದಿ: 11-01-2023.

*********

ವಿಧಾನಸಭೆ ಸಾರ್ವತ್ರಿಕ ಚುನಾವಣೆಗಳು-2023 ರ ಸಂಬಂಧ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣ ಕ್ರಮಗಳನ್ನು ಕೈಗೊಳ್ಳುವಂತೆ ಭಾರತ ಚುನಾವಣಾ ಆಯೋಗದ ಉಲ್ಲೇಖಿತ ಪತ್ರದಲ್ಲಿ ನಿರ್ದೇಶನಗಳನ್ನು ನೀಡಲಾಗಿದೆ. ಅದರಂತೆ ಕ್ರಮವಹಿಸುವಂತೆ ತಮ್ಮನ್ನು ಕೋರಿದೆ. ಸದರಿ ಪತ್ರದ ಪ್ರತಿಯನ್ನು ಈ ಕೂಡ ಲಗತ್ತಿಸಿ ಕಳುಹಿಸಿದೆ.

**ಚುನಾವಣಾ ವೇಳಾಪಟ್ಟಿ ಪ್ರಕಟವಾದ 24 ಗಂಟೆಯೊಳಗೆ ಈ ಕೆಳಕಂಡಂತೆ ಕ್ರಮವಹಿಸಲಾಗುವುದು.**

- ಸರ್ಕಾರಿ ಕಟ್ಟಡಗಳು / ಕಛೇರಿಗಳು/ ಆವರಣದ/ ಬೋರ್ಡ್‌ಗಳು ಇತ್ಯಾದಿಗಳಲ್ಲಿ ಇರುವ ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಒಳಪಡುವಂತಹ ಗೋಡೆ ಬರಹಗಳು, ಪೋಸ್ಟರ್‌ಗಳು, ಬ್ಯಾನರ್, ಕಟೌಟ್ / ಹೋಲ್ಡಿಂಗ್ಸ್ / ಫ್ಯಾಗ್ಸ್ / ಇತ್ಯಾದಿ ತೆರುವುಗೊಳಿಸಲು ಕ್ರಮವಹಿಸಲಾಗುವುದು.

- ಚುನಾವಣೆಗೆ ಸಂಬಂಧಪಡುವ ರಾಜಕೀಯ ಪಕ್ಷಗಳು / ಅಭ್ಯರ್ಥಿಗಳು/ ಇತರೆ ವ್ಯಕ್ತಿಗಳು ( ಚುನಾವಣಾ ಕರ್ತವ್ಯ ನಿರತ ಅಧಿಕಾರಿ/ ನೌಕರರನ್ನು ಹೊರತುಪಡಿಸಿ ) ಸರ್ಕಾರಿ ವಾಹನಗಳನ್ನು ಬಳಸುವುದನ್ನು ನಿಷೇಧಿಸಲಾಗಿರುತ್ತದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದ ಅನುಸಾರ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಸರ್ಕಾರಿ ವಾಹನಗಳನ್ನು ವಶಕ್ಕೆ ತೆಗೆದುಕೊಳ್ಳಲು ಕ್ರಮವಹಿಸಲಾಗುವುದು.

**ಚುನಾವಣಾ ವೇಳಾಪಟ್ಟಿ ಪ್ರಕಟವಾದ 48 ಗಂಟೆಯೊಳಗೆ ಈ ಕೆಳಕಂಡಂತೆ ಕ್ರಮವಹಿಸಲಾಗುವುದು.**

- ಸಾರ್ವಜನಿಕರ ಸ್ವತ್ತು ಹಾಗೂ ಸಾರ್ವಜನಿಕ ಆವರಣಗಳು ಅಂದರೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಏರ್ ಪೋರ್ಟ್, ರೈಲ್ವೆ ಬ್ರಿಡ್ಜ್‌ಗಳು, ರಸ್ತೆ ಹಾಗೂ ರಸ್ತೆ ಬದಿಗಳಲ್ಲಿ, ಸರ್ಕಾರಿ ಬಸುಗಳು, ವಿದ್ಯುತ್ / ಟೆಲಿಫೋನ್ ಕಂಬಗಳು, ಮುನಿಸಿಪಲ್ ಹಾಗೂ ಸ್ಥಳೀಯ ಸಂಸ್ಥೆಗಳ ಕಟ್ಟಡಗಳು, ಇತ್ಯಾದಿಗಳಲ್ಲಿ ಇರುವ ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಒಳಪಡುವಂತಹ ಗೋಡೆ ಬರಹಗಳು, ಪೋಸ್ಟರ್‌ಗಳು, ಬ್ಯಾನರ್, ಕಟೌಟ್ / ಹೋಲ್ಡಿಂಗ್ಸ್ / ಫ್ಯಾಗ್ಸ್ / ಇತ್ಯಾದಿ ತೆರುವುಗೊಳಿಸಲು ಕ್ರಮವಹಿಸಲಾಗುವುದು.

**ಚುನಾವಣಾ ವೇಳಾಪಟ್ಟಿ ಪ್ರಕಟವಾದ 72 ಗಂಟೆಯೊಳಗೆ ಈ ಕೆಳಕಂಡಂತೆ ಕ್ರಮವಹಿಸಲಾಗುವುದು.**

- ಸ್ಥಳೀಯ ಸಂಸ್ಥೆಗಳ ನಿಯಮಗಳು ಮತ್ತು ಮಾನ್ಯ ನ್ಯಾಯಾಲಯಗಳ ಆದೇಶ ಮತ್ತು ನಿರ್ದೇಶನಗಳ ವ್ಯಾಪ್ತಿಗೆ ಒಳಪಟ್ಟು ಎಲ್ಲಾ ರೀತಿಯ ಖಾಸಗಿ ಸ್ವತ್ತುಗಳ ಮೇಲೆ ಪ್ರಚುರ ಪಡಿಸಿರುವ ಎಲ್ಲಾ ರೀತಿಯ ಅನಧಿಕೃತ ರಾಜಕೀಯ ಜಾಹೀರಾತುಗಳನ್ನು ತೆರವುಗೊಳಿಸುವುದು.

**ಚುನಾವಣಾ ವೇಳಾಪಟ್ಟಿ ಪ್ರಕಟವಾದ ತಕ್ಷಣ ಈ ಕೆಳಕಂಡಂತೆ ಕ್ರಮವಹಿಸಲಾಗುವುದು.**

- ಚುನಾವಣಾ ವೇಳಾಪಟ್ಟಿ ಪ್ರಕಟಿಸಿ ತಕ್ಷಣದಿಂದ ಸಾರ್ವಜನಿಕ ನಿಧಿಯಿಂದ (ಸರ್ಕಾರಿ ಹಣ) ಯಾವುದೇ ಜಾಹೀರಾತುಗಳನ್ನು ನೀಡುವುದಕ್ಕೆ ನಿಷೇಧವಿರುತ್ತದೆ. ( ದಿನಪತ್ರಿಕೆಗಳು / ಇತರೆ ಮಾಧ್ಯಮಗಳು / ಸರ್ಕಾರಿ ಪ್ರಚಾರ ಮಾಧ್ಯಮಗಳು / ಮುದ್ರಣ ಮಾಧ್ಯಮ / ) ಆದ್ದರಿಂದ ಚುನಾವಣಾ ವೇಳಾಪಟ್ಟಿ ಪ್ರಕಟವಾದ ಕ್ಷಣದಿಂದ ಸಾರ್ವಜನಿಕರ ನಿಧಿ (ಸರ್ಕಾರಿ ಹಣ) ದಿಂದ ಯಾವುದೇ ಜಾಹೀರಾತುಗಳನ್ನು ಪ್ರಕಟಿಸತಕ್ಕದ್ದಲ್ಲ.

**ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಿದ ಬಗ್ಗೆ ನೀಡಬೇಕಾದ ವರದಿಯ ನಮೂನೆ ಕೆಳಕಂಡಂತೆ ಇರುತ್ತದೆ.**

| Name Of the Taluk: | | | | | | | AS on Date: | | | | | | |
|---|---|---|---|---|---|---|---|---|---|---|---|---|---|
| Public Property | | | | | | | Private Property | | | | | | |
| NO of cases Recorded | | | | | No of defacement removel | cases Lodged | NO of cases Recorded | | | | | No of defacement removel | cases Lodged |
| Wall Writing | posters | Banners | Others | Total | | | Wall Writing | posters | Banners | Others | Total | | |

ತಮ್ಮ ನಂಬುಗೆಯ

ಅಪರ ಜಿಲ್ಲಾಧಿಕಾರಿ
ಮತ್ತು ಅಪರ ಜಿಲ್ಲಾ ಚುನಾವಣಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1. ಪೊಲೀಸ್ ಆಯುಕ್ತರು, ಮೈಸೂರು ನಗರ ಮೈಸೂರು
2. ಪೊಲೀಸ್ ಅಧೀಕ್ಷಕರು, ಮೈಸೂರು ಜಿಲ್ಲೆ, ಮೈಸೂರು
3. ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು
4. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು
5. ಉಪ ವಿಭಾಗಾಧಿಕಾರಿಗಳು, ಮೈಸೂರು ಮತ್ತು ಹುಣಸೂರು ಉಪವಿಭಾಗ
6. ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿ
7. ಜಿಲ್ಲೆಯ ಎಲ್ಲಾ ನಗರಸಭೆ ಪೌರಾಯುಕ್ತರಿಗೆ
8. ಜಿಲ್ಲೆಯ ಎಲ್ಲಾ ಪುರಸಭೆ / ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ